# ಪಲ್ಟಿ, ಸೈಕಲ್ ದುನಿಯಾ!

ಮೂರು ತರಹ ಪಲ್ಟಿ ಹೊಡೆದು, ಎದೆಯುಬ್ಬಿಸಿ ನಿಂತ ಯುವಕನಿಗೆ ಮುಂದೆ ತಾನು ಚಿತ್ರರಂಗದಲ್ಲಿ ಕೋಟಿ ಸಂಭಾವನೆ ಪಡೆಯುವ ನಾಯಕ ಆಗಬಹುದೆಂಬ ಸಣ್ಣ ನಿರೀಕ್ಷೆಯೂ ಇರಲಿಲ್ಲ. ಜಿಮ್‌ನಲ್ಲಿ ಸಾಮು ಮಾಡುವುದು, ದೇಹ ಕರಗಿಸಲು ಬಂದವರಿಗೆ ತರಬೇತಿ ಕೊಡುವುದು, ಸಿನಿಮಾದಲ್ಲಿ ಸಾಹಸ ಮಾಡಲು ಯಾರಾದರೂ ಬೇಕು ಎಂದೊಡನೆ ಜಿಗಿದು ಓಡುವುದು—ಇವಿಷ್ಟೂ ಯುವಕನ ನಿತ್ಯ ಕಾಯಕ. ದಿನಕ್ಕೆಷ್ಟು ಮೊಟ್ಟೆ ತಿನ್ನಬೇಕು, ಚಿಕನ್ ಪ್ರಮಾಣ ವಾರಕ್ಕೆ ಎಷ್ಟಿರಬೇಕು, ಯಾವ್ಯಾವ ದಿನ ಯಾವ ಅಂಗಕ್ಕೆ ವ್ಯಾಯಾಮ ಮಾಡಬೇಕು... ಇಂಥದ್ದೇ ಲೆಕ್ಕಾಚಾರ.

ಟೈಗರ್ ಪ್ರಭಾಕರ್ ಚಿತ್ರಗಳನ್ನು ನೋಡಿ ಬೆಳೆದ ಯುವಕ ಮುಂದೆ ಒಂದು ಸಿನಿಮಾದಲ್ಲಿ ತನ್ನನ್ನು ತಾನು ಟೈಗರ್ ಅಭಿಮಾನಿ ಎಂದು ಕರೆದುಕೊಂಡಿದ್ದನ್ನು ಕೆಲವರು ತಮಾಷೆಯಾಗಿ ಸ್ವೀಕರಿಸಿದರು. ಪ್ರತಿಭಾವಂತ ನಿರ್ದೇಶಕ ಚೊಚ್ಚಿಲ ಸಿನಿಮಾ ಮಾಡಿದಾಗ ನಾಯಕನ ಪಟ್ಟ ಒಲಿದುಬಂತು. ಅದುವರೆಗೆ ಸೈಕಲ್ ಹೊಡೆದದ್ದಕ್ಕೆ ಸಂದ ಫಲವದು. ಯುವಕನ ದುನಿಯಾ ಅಲ್ಲಿಂದ ಬದಲಾಯಿತು.

ನಿರ್ಮಾಪಕರು ಮುಂಗಡಹಣ ಹಿಡಿದು ಎದುರಲ್ಲಿ ನಿಂತರು. ಇದ್ದ ಜಾಗದಲ್ಲೇ ಒಂದಿಷ್ಟು ಸಿನಿಮಾಗಳಿಗೆ ಬುಕ್ ಆಗುವ ಅವಕಾಶ. 'ಒಂದು ಗೆಲುವು, ಅವಕಾಶ ಹಲವು' ಎಂಬ ತನ್ನ ಕುರಿತ ಲೇಖನದ ಶೀರ್ಷಿಕೆ ಓದಿ ಪುಲಕಿತನಾದ ನಾಯಕ ಜನಪ್ರಿಯತೆ ನಿಭಾಯಿಸುವಲ್ಲಿ ತಡಬಡಾಯಿಸಿದ್ದೂ ಇದೆ. ಸಮಾಜಮುಖಿ ಕೆಲಸಗಳನ್ನು ಮಾಡುವುದಾಗಿ ಹೇಳಿದ್ದು ಸಕಾರಾತ್ಮಕ ಸುದ್ದಿ. ನಟೀಮಣಿಯೊಬ್ಬಳಿಗೆ 'ಬಾಳು ಕೊಟ್ಟಿದ್ದಾಗಿ' ಆಪ್ತೇಷ್ಟರಲ್ಲಿ ಹೇಳಿಕೊಂಡಿದ್ದು ಸಮಾಜದ ಕಣ್ಣಿಗೆ ನಕಾರಾತ್ಮಕ ಸುದ್ದಿ. ಈ ಹೊಯ್ದಾಟ ಖಾಸಗಿ ಬದುಕಿನ ಮೊಗಸಾಲೆಗೆ ನುಗ್ಗಿದ್ದೇ ಟೀವಿ ಚಾನೆಲ್‌ಗಳಿಗೆ ಸಮೃದ್ಧ ಆಹಾರ. 'ಗಂಡ–ಹೆಂಡತಿ ಉಂಡು ಮಲಗುವ ತನಕ' ಎಂಬ ನಾಣ್ನುಡಿಯಿಲ್ಲಿ ಸುಳ್ಳಾಗಿ, 'ಗಂಡ–ಹೆಂಡತಿ ಜಗಳ ಚಾನೆಲ್ ಮನಸ್ಸು ಮಾಡುವ ತನಕ' ಎಂದು ಬದಲಾಯಿತು. ತಕರಾರುಗಳು ಒಂದು ಹಂತಕ್ಕೆ ಬಂದು ಸಂಸಾರ ತಾಪತ್ರಯಕ್ಕೆ 'ಶುಭಂ'.

ನಾಯಕಿಯರನ್ನು ಬಣ್ಣಿಸುವಾಗ ಆಗೀಗ ಕಣ್ಣರಳಿಸುವ ಈ ನಾಯಕನ ಮೇಲೆ ಕಲೆಗಳ ಸಾಮ್ರಾಟ ಎನ್ನಿಸಿಕೊಂಡ ನಿರ್ದೇಶಕರು ಒಮ್ಮೆ ಮುನಿಸಿಕೊಂಡಿದ್ದರು. ಆಮೇಲೆ ಅದೇ ನಿರ್ದೇಶಕ ಇನ್ನೊಂದು ಸಿನಿಮಾಗೆ ಇದೇ ನಾಯಕನ ನೆಚ್ಚಿಕೊಂಡಿದ್ದು ಚಿತ್ರರಂಗದ ಚಂಚಲತೆಗೆ ಉದಾಹರಣೆ.

ಮೊನ್ನೆ ಮೊನ್ನೆ ಇದೇ ನಾಯಕ ನೀರಿಗೆ ಧುಮುಕಿದಾಗ ಅನೇಕರು ನೋಡಿದರು. ಸಾಹಸ ಮಾಡಲು ಹೋದಾಗ ಆದ ಅವಘಡ ಕಂಡು ಮರುಗಿದರು. ಸಾಹಸ ಪ್ರೀತಿ ಏನೆಲ್ಲಾ ಮಾಡಿಸುತ್ತದೆ ನೋಡಿ.

**● ವಿಶಾಖ ಎನ್.**

Printed and Published by B.A. Ravi on behalf of **The Printers (Mysore) Private Ltd.** Printed at M/s.Geetanjali Graphics # B-71, New No.84, KSSIDC, Indl. Estate, 6th Block, Rajajinagar, Bengaluru-560010. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: **K.N. SHANTH KUMAR.**

Editorial Office: 75, M.G Road, Bengaluru-560 001 E-mail:editormy@mayura.co.in. Phone: 2588 0000, Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited. RNI No 17129/68